# ಬಾಗಲಕೋಟ ವಿಶ್ವವಿದ್ಯಾಲಯ

(ಕರ್ನಾಟಕ ಸರ್ಕಾರದರಾಜ್ಯ ಸಾರ್ವಜನಿಕ ವಿಶ್ವವಿದ್ಯಾಲಯ)
ಮುಧೋಳ ರಸ್ತೆ, ಜಮಖಂಡಿ-587301 ಬಾಗಲಕೋಟೆಜಿಲ್ಲೆ

# Bagalkot University

(State Public University of Govt. of Karanataka)
Mudhol Road, Jamkhandi-587301 Dist: Bagalkote

Mail ID :bgkujkd@gmail.com
Website: https://bgku.ac.in

Tel No: (08353)295123, 295124


BGKUJ/PHD/2025-26/ 119 Date10-05-2025

## ಪಿ.ಎಚ್.ಡಿ ಪ್ರವೇಶಾತಿ (ಪರಿಷ್ಕೃತ) ಅಧಿಸೂಚನೆ : 2025-26

**ವಿಷಯ:** 2025-26 ನೇ ಸಾಲಿಗೆ ಪಿ.ಎಚ್.ಡಿ ಪದವಿ ಪ್ರವೇಶಾತಿಗಾಗಿ.
**ಉಲ್ಲೇಖ:** ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:09-05-2025.

2025-26ನೇ ಸಾಲಿಗೆ ಪಿಎಚ್.ಡಿ. ಪದವಿ (ಪೂರ್ಣಕಾಲಿಕ ಮತ್ತು ಅರೇಕಾಲಿಕ) ಪ್ರವೇಶಾತಿಗೆ ಸಂಬಂಧಿಸಿದಂತೆ, ಬಾಗಲಕೋಟ ವಿಶ್ವವಿದ್ಯಾಲಯ, ಜಮಖಂಡಿಯ ವಿವಿಧ ವಿಷಯಗಳಲ್ಲಿ ಅರ್ಹ ಅಭ್ಯರ್ಥಿಗಳಿಂದ ಆಫ್ ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ., ಗಣಕ ವಿಜ್ಞಾನ, ಗಣಿತಶಾಸ್ತ್ರ, ವ್ಯವಹಾರ ನಿರ್ವಹಣೆ, ಸಮಾಜಕಾರ್ಯ, ವಾಣಿಜ್ಯ ಶಾಸ್ತ್ರ, ಅಭ್ಯರ್ಥಿಗಳು ನಿಗದಿತ ನಮೂನೆಯ (Application-A) ಅರ್ಜಿಯನ್ನು ವಿಶ್ವವಿದ್ಯಾಲಯದ ವೆಬ್ಸೈಟ್ ಮೂಲಕ ಪಡೆಯುವುದು. ಭರ್ತಿ ಮಾಡಿದ ಅರ್ಜಿಯ ಒಂದು ಮುದ್ರಿತ ಪ್ರತಿಯನ್ನು (Hard copy) ದೃಢಿಕರಿಸಿದ ಪೂರಕ ದಾಖಲೆಗಳೊಂದಿಗೆ ಖುದ್ದಾಗಿ ಅಥವಾ ಅಂಚೆ ಮುಖಾಂತರ ದಿನಾಂಕ:26-05-2025 ರೊಳಗಾಗಿ ಡಾ. ಚಿದಾನಂದ ಧವಳೇಶ್ವರ ನಿರ್ದೇಶಕರು, ಸಂಶೋಧನಾ ಮತ್ತು ಅಭಿವೃದ್ಧಿ ಕೋಶ ಬಾಗಲಕೋಟ ವಿಶ್ವವಿದ್ಯಾಲಯ, ಜಮಖಂಡಿಯಲ್ಲಿ-587301 ಈ ವಿಳಾಸಕ್ಕೆ ಸಲ್ಲಿಸತಕ್ಕದ್ದು. ಸಾಮಾನ್ಯ ಅಭ್ಯರ್ಥಿ ಹಾಗೂ ಇತರೇ ಹಿಂದುಳಿದ ವರ್ಗದ ಅಭ್ಯರ್ಥಿಗಳಿಗೆ ಅರ್ಜಿ ಶುಲ್ಕ ರೂ.2,200/- ಮತ್ತು ಪರಿಶಿಷ್ಟಜಾತಿ/ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ-1, ವಿಕಲಚೇತನ ಅಭ್ಯರ್ಥಿಗಳಿಗೆ ರೂ.1,100/-ಗಳು. ಶುಲ್ಕದ ಡಿ.ಡಿ./ಚಲನ್ ನ್ನು ಹಣಕಾಸು ಅಧಿಕಾರಿಗಳು ಬಾಗಲಕೋಟ ವಿಶ್ವವಿದ್ಯಾಲಯ, ಜಮಖಂಡಿ ಇವರಿಗೆ ಭರಿಸಿದ ಮೂಲ ಪ್ರತಿಯನ್ನುಅರ್ಜಿಯೊಂದಿಗೆ ಲಗತ್ತಿಸತಕ್ಕದ್ದು. ಕೊನೆಯ ದಿನಾಂಕ:26-05-2025ರ ನಂತರ ಅರ್ಜಿ ಸಲ್ಲಿಸುವವರು ಅರ್ಜಿ ಶುಲ್ಕದೊಂದಿಗೆ ದಂಡ ಶುಲ್ಕರೂ. 300/-ಗಳನ್ನು ದಿನಾಂಕ: 31 -05-2025 ರ ಒಳಗಾಗಿ ಸಲ್ಲಿಸತಕ್ಕದ್ದು.

| ಕ್ರ.ಸಂ. | ವಿವರ | ದಿನಾಂಕ |
|---|---|---|
| 1 | ಅರ್ಜಿ ಪಡೆಯುವ ದಿನಾಂಕ<br>(ಅರ್ಜಿ ನಮೂನೆಯನ್ನು ವಿಶ್ವವಿದ್ಯಾಲಯದ ವೆಬ್ ಸೈಟ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳುವುದು) | 10-05-2025 |
| 2 | ಭರ್ತಿ ಮಾಡಿದ ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ | 26-05-2025 |
| 3 | ದಂಡ ರೂ. 300/- ಸಹಿತ ಕೊನೆಯ ದಿನಾಂಕ | 31-05-2025 |

1. **ಅರ್ಹತೆ:** ಭಾರತೀಯ/ವಿದೇಶಿ ಅಭ್ಯರ್ಥಿಗಳು/ಸರ್ಕಾರದಿಂದ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪರೀಕ್ಷೆಯಲ್ಲಿ ಕನಿಷ್ಠ ೫೫% ಅಂಕಗಳನ್ನು ಪಡೆದಿರಬೇಕು (೫೦% ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ-1/ವಿಕಲಚೇತನ) ಅಥವಾ ತತ್ಸಮಾನ ಪದವಿಯಲ್ಲಿ ಅರ್ಹರಾಗಿರಬೇಕು.

2. ಭಾರತೀಯ ಮತ್ತು ವಿದೇಶಿ ಅಭ್ಯರ್ಥಿಗಳು, FIP/QIP ಅಡಿಯಲ್ಲಿನ ಉಪನ್ಯಾಸಕರು ಹಾಗೂ UGC-JRF/UGC-CSIR-JRF/NET/SLET/GATE/GRE ತೇರ್ಗಡೆಯಾದ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ.

3. ದಂಡ ಸಹಿತ ಕೊನೆಯ ದಿನಾಂಕದ ನಚಿತರ ಬಂದಂತಹ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ ಮತ್ತು ಒಮ್ಮೆ ಪಾವತಿಸಿದ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.

4. ಅಪೂರ್ಣ ಅರ್ಜಿಗಳು ಮತ್ತು ಸಂಬಂಧಪಟ್ಟ ದಾಖಲೆಗಳು ಇಲ್ಲದಿರುವ ಅರ್ಜಿಯನ್ನು ತಿರಸ್ಕರಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಅಭ್ಯರ್ಥಿಗಳು ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರನ್ನು ಸಂಪರ್ಕಿಸುವುದು.

5. ಪಿಎಚ್.ಡಿ. ಸಂಶೋಧನಾರ್ಥಿಯಾಗಿ ಪ್ರವೇಶ ಪಡೆಯಲು ಅಗತ್ಯವಿರುವ ಮಾಹಿತಿಗಾಗಿ ಕಾಲಕಾಲಕ್ಕೆ ಬಾಗಲಕೋಟ ವಿಶ್ವವಿದ್ಯಾಲಯದ ವೆಬ್ ಸೈಟ್ https://bgku.ac.in ನಲ್ಲಿ ಅಳವಡಿಸುವ ಮಾಹಿತಿಯನ್ನು ಗಮನಿಸುವುದು.

6. **ಖಾಲಿ ಇರುವ ಸ್ಥಾನಗಳ ಯಾದಿ:**

**ವಿವಿಧ ವಿಭಾಗಗಳಲ್ಲಿ ಖಾಲಿ ಇರುವ ಸ್ಥಾನಗಳು ಈ ಕೆಳಗಿನಚಿತಿವೆ:**

| SI.No. | Name of the Department | No. of Vacancies |
|---|---|---|
| 1 | ವಾಣಿಜ್ಯಶಾಸ್ತ್ರ | 06 |
| 2 | ಗಣಕವಿಜ್ಞಾನ | 02 |
| 3 | ಗಣಿತಶಾಸ್ತ್ರ | 04 |
| 4 | ವ್ಯವಹಾರ ನಿರ್ವಹಣೆ | 04 |
| 5 | ಸಮಾಜಕಾರ್ಯ | 06 |
| 6 | ರಸಾಯನಶಾಸ್ತ್ರ | 04 |
| | **ಒಟ್ಟು** | **26** |

7. **ಜಾತಿ ಪ್ರಮಾಣ ಪತ್ರ ಮತ್ತು ಶುಲ್ಕ ವಿನಾಯಿತಿ:**

ಪ.ಜಾ/ಪ.ಪಂ/ಪ್ರವರ್ಗ–1 ಅಭ್ಯರ್ಥಿಗಳು ತಹಶೀಲ್ದಾರ ಅಥವಾ ಅಧಿಕೃತ ಅಧಿಕಾರಿ ನೀಡಿರುವ ಜಾತಿ ಪ್ರಮಾಣ ಪತ್ರಗಳನ್ನು ಅರ್ಜಿಯ ಜೊತೆ ಸಲ್ಲಿಸುವುದು. ಆದಾಯ ಪ್ರಮಾಣ ಪತ್ರವು ಪ್ರಸ್ತುತ ಅಧಿಸೂಚನೆ ದಿನಾಂಕಕ್ಕೆ ಅನ್ವಯಿಸಿ 05 ವರ್ಷ ಮೀರಿರಬಾರದು ಹಾಗೂ ಆದಾಯವು 2.5 ಲಕ್ಷರೂಪಾಯಿಗಿಂತ ಕಡಿಮೆ ಇರಬೇಕು. ಅನ್ಯ ವಿಶ್ವವಿದ್ಯಾಲಯಗಳ ಅಭ್ಯರ್ಥಿಗಳು ಆಯ್ಕೆಯಾದಲ್ಲಿ ಪ್ರವೇಶಾತಿ ಸಂದರ್ಭದಲ್ಲಿ ಬಾಗಲಕೋಟ ವಿಶ್ವವಿದ್ಯಾಲಯಕ್ಕೆ ನಿಗದಿತ ದಾಖಲೆಗಳನ್ನು ಸಲ್ಲಿಸಿ ಮತ್ತು ಶುಲ್ಕವನ್ನು ಭರಿಸಿ ಅರ್ಹತಾ ಪ್ರಮಾಣ ಪತ್ರವನ್ನು ಪಡೆದು ಸಲ್ಲಿಸುವುದು.

8. **ಸಾಮಾನ್ಯ ಸೂಚನೆಗಳು:**

a) ಅರ್ಜಿಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಿಂದ ಪಡೆದು, ಸಂಶೋಧನಾ ಮತ್ತು ಅಭಿವೃದ್ಧಿ ಕೋಶಕ್ಕೆ ನಿಗದಿತ ಅವಧಿಯೊಳಗಾಗಿ ಸಲ್ಲಿಸುವುದು

b) ಮೀಸಲಾತಿ ಬಯಸುವ ಅಭ್ಯರ್ಥಿಗಳು ಸಂಬಂಧಿಸಿದ ಜಾತಿ /ಆದಾಯ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು, ಹಾಗೂ ವಿಕಲಚೇತನ ಅಭ್ಯರ್ಥಿಗಳು ವೈದ್ಯಕೀಯ ಪ್ರಮಾಣ ಪತ್ರ/UDID ಇಲ್ಲವಾದಲ್ಲಿ ಅಭ್ಯರ್ಥಿಗಳನ್ನು ಸಾಮಾನ್ಯ ಅಭ್ಯರ್ಥಿಗಳೆಂದು ಪರಿಗಣಿಸಲಾಗುವುದು.

c) ಪೂರ್ಣಕಾಲಿಕ ಪಿಎಚ್.ಡಿ. ಬಯಸುವ ಅಭ್ಯರ್ಥಿಗಳು ಮುಚ್ಚಳಿಕೆ ಪತ್ರವನ್ನು ಸಲ್ಲಿಸತಕ್ಕದ್ದು ಹಾಗೂ ಅರೆಕಾಲಿಕ ಪಿಎಚ್.ಡಿ. ಬಯಸುವ ಅಭ್ಯರ್ಥಿಗಳು ಸಂಬಂಧಪಟ್ಟ ಪ್ರಾಧಿಕಾರದಿಂದ ನಿರಾಕ್ಷೇಪಣಾ ಪ್ರಮಾಣ(NOC)ಪತ್ರವನ್ನು ಸಲ್ಲಿಸುವುದು (ಆಯ್ಕೆಯ ಹಂತದಲ್ಲಿ).

d) ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಸ್ವಯಂದೃಢೀಕರಿಸಿ ಸಲ್ಲಿಸತಕ್ಕದ್ದು.

e) ಸರ್ಕಾರಿ/ಅರೆಸರ್ಕಾರಿ ಸೇವೆಯಲ್ಲಿ ಇದ್ದಂತಹ ಅಭ್ಯರ್ಥಿಗಳು ಸಂಬಂಧಪಟ್ಟ ಪ್ರಾಧಿಕಾರದ ಮುಖಾಂತರ ಸಲ್ಲಿಸಕ್ಕದ್ದು.

f) ಅರ್ಜಿಗಳನ್ನು ಸಾರ್ವತ್ರಿಕ ರಜೆ ಹಾಗೂ ಒಂದನೇ ಶನಿವಾರ, ಮೂರನೇ ಶನಿವಾರ ಮತ್ತು ಭಾನುವಾರಗಳಂದು ಹೊರತುಪಡಿಸಿ, ಎಲ್ಲಾ ದಿನಗಳಲ್ಲಿ ಬೆಳಗ್ಗೆ 8:30 ರಿಂದ ಮಧ್ಯಾಹ್ನ 1:30 ಗಂಟೆವರೆಗೆ ಸ್ವೀಕರಿಸಲಾಗುವುದು..

g) ದಾಖಲಾತಿ ಪ್ರಕ್ರಿಯೆಯಲ್ಲಿ ವಿಶ್ವವಿದ್ಯಾಲಯ, ಹಂತದಲ್ಲಿ ಕೈಕೊಳ್ಳುವ ನಿರ್ಣಯ ಅಂತಿಮದಾಯಕವಾಗಿರುತ್ತದೆ.

h) ವಿಶ್ವವಿದ್ಯಾಲಯವು ಸೀಟುಗಳನ್ನು ಭರ್ತಿ ಮಾಡುವ ಮತ್ತು ಮಾಡದೇ ಇರುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ ಹಾಗೂ ಪ್ರಸ್ತುತ ಜಾಲತಾಣದಲ್ಲಿ ಅಳವಡಿಸಿರುವ Ph.D. ಖಾಲಿ ಸೀಟುಗಳ ಸಂಖ್ಯೆಗಳು ಬದಲಾವಣೆಗಳಿಗೆ ಒಳಪಟ್ಟಿರುತ್ತದೆ.

ಕುಲಸಚಿವರು,

ಕುಲಸಚಿವರು
ಬಾಗಲಕೋಟ ವಿಶ್ವವಿದ್ಯಾಲಯ
(ಕರ್ನಾಟಕ ಸರ್ಕಾರದ ರಾಜ್ಯ ಸಾರ್ವಜನಿಕ ವಿಶ್ವವಿದ್ಯಾಲಯ)
ಜಮಖಂಡಿ-587301. ಜಿ. ಬಾಗಲಕೋಟ.

ಲಗತ್ತು: **Application –A**

**ಇವರಿಗೆ,**

1. ಎಲ್ಲ ನಿಖಾಯಗಳ ಡೀನರು, ಬಾಗಲಕೋಟ ವಿಶ್ವವಿದ್ಯಾಲಯ, ಜಮಖಂಡಿ.
2. ಎಲ್ಲ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಮುಖ್ಯಸ್ಥರುಗಳು, ಬಾಗಲಕೋಟ ವಿಶ್ವವಿದ್ಯಾಲಯ, ಜಮಖಂಡಿ.

**ಪ್ರತಿ ಮಾಹಿತಿಗಾಗಿ:**

1. ಕುಲಸಚಿವರು (ಮೌಲ್ಯಮಾಪನ), ಬಾಗಲಕೋಟ ವಿಶ್ವವಿದ್ಯಾಲಯ, ಜಮಖಂಡಿ.
2. ಹಣಕಾಸು ಅಧಿಕಾರಿಗಳು, ಬಾಗಲಕೋಟ ವಿಶ್ವವಿದ್ಯಾಲಯ, ಜಮಖಂಡಿ.
3. ಆಪ್ತ ಕಾರ್ಯದರ್ಶಿಗಳು, ಮಾನ್ಯ ಕುಲಪತಿಗಳ ಸಚಿವಾಲಯ ಬಾಗಲಕೋಟ ವಿಶ್ವವಿದ್ಯಾಲಯ, ಜಮಖಂಡಿ.
4. ಆಪ್ತ ಕಾರ್ಯದರ್ಶಿಗಳು, ಮಾನ್ಯ ಕುಲಸಚಿವರ ಕಾರ್ಯಾಲಯ, ಬಾಗಲಕೋಟ ವಿಶ್ವವಿದ್ಯಾಲಯ, ಜಮಖಂಡಿ.
5. ಕಛೇರಿಪ್ರತಿ.

## ಲಗತ್ತುಗಳು:

1. S.S.L.C Marks card
2. PUC Marks card
3. UG Degree Marks card and passing certificate
4. PG Degree Marks card and passing certificate
5. Caste and Income Certificate
6. PH/HK Certificate (if applicable)
7. UGC-JRF/UGC-CSIR-JRF/NET/SLET/GATE/GRE Certificate
8. Aadhar Card
9. Photo-2